ಗಡಿಯಾರದ ಅಲಾರ್ಮ್ ಸದ್ದಿಗೆ ನೀವು ಎಚ್ಚರಗೊಳ್ಳುತ್ತೀರಿ. ಮೈಮುರಿದು ಏಳುವಷ್ಟರಲ್ಲಿ ಮನೆಯ ಕಾಫಿ ಮೇಕರ್ ನಿಮಗೆ ಬೇಕಾದ ಸುವಾಸನೆಯುಕ್ತ ಕಾಫಿ ತಯಾರಿಸಿ ಕುಡಿಯಲು ಆಹ್ವಾನ ನೀಡುತ್ತದೆ. ಅದರ ಸ್ವಾದ ಅನುಭವಿಸುತ್ತ, ಮೊಬೈಲ್‌ನ ಸಂದೇಶ ಮತ್ತು ದಿನಚರಿಯನ್ನು ಓದಿ ಮುಗಿಸುವುದರಲ್ಲಿ ಬಚ್ಚಲು ಮನೆಯ ಗೀಸರ್ ನಿಮ್ಮ ಚರ್ಮಕ್ಕೆ ಹಿತವೆನಿಸುವಷ್ಟು ಬಿಸಿ ನೀರನ್ನು ಕಾಯಿಸಿ ಹದವಾದ ಸ್ನಾನಕ್ಕೆ ಕರೆಯುತ್ತದೆ. ಸ್ನಾನ ಮುಗಿಸಿ, ಬಟ್ಟೆ ಧರಿಸಿ ನೆಲ ಮಹಡಿಗೆ ಬರುವಷ್ಟರಲ್ಲಿ ಚಾಲಕರಹಿತ ಕಾರು ನಿಮಗಾಗಿ ಎಂಜಿನ್ ಆನ್ ಮಾಡಿಕೊಂಡು ಕಾಯುತ್ತಿರುತ್ತದೆ. ಯಾವುದೋ ಕಾರಣಕ್ಕೆ ಟ್ರಾಫಿಕ್ ಜಾಮ್ ಆಗಿ, ಕಚೇರಿ ತಲುಪುವುದು ತಡ ಆಗುತ್ತಿದೆ ಎನಿಸಿದಾಗ ನಿಮ್ಮ ಕಾರೇ 'ಆಫೀಸಿಗೆ ನೀವು ತಡವಾಗಿ ತಲುಪುತ್ತೀರಿ' ಎಂದು ಸಂದೇಶ ರವಾನಿಸುತ್ತದೆ. ಅದನ್ನು ಗ್ರಹಿಸುವ ಆ ತುದಿಯ ಸಾಧನ 'ಐದು ನಿಮಿಷದ ಒಳಗೆ ತಲುಪುವುದಾದರೆ ಇಲ್ಲಿಗೆ ಬನ್ನಿ, ಇಲ್ಲದಿದ್ದರೆ ನೀವಿರುವ ಸ್ಥಳದಿಂದ ನೂರು ಫರ್ಲಾಂಗ್ ದೂರದ ತಮ್ಮದೇ ಸಂಸ್ಥೆಯ ಇನ್ನೊಂದು ಕಚೇರಿಗೆ ಹೋಗಿ, ಅಲ್ಲಿಂದಲೇ ಕೆಲಸ ಮಾಡಿ' ಎಂಬ ಸಂದೇಶ ಕಳಿಸುತ್ತದೆ. ನೀವು ಹಾಯಾಗಿ ಹತ್ತಿರದ ಸ್ಥಳಕ್ಕೆ ಧಾವಿಸಿ ಕೆಲಸ ಮುಗಿಸಿ, ಅಂತಿಮ ಹಂತದ ಮಾಹಿತಿಯನ್ನೂ ಹೆಡ್ ಆಫೀಸಿಗೆ ರವಾನಿಸಿ, ಕುರ್ಚಿಯಲ್ಲಿ ನಿರುಮ್ಮಳರಾಗಿ ಕುಳಿತು ಕಾಫಿ ಕಪ್‌ಗೆ ಕೈ ಹಾಕುತ್ತೀರಿ.

*****

ಮನೆಯಿಂದ ಹೊರಟು ದೂರದ ಕಚೇರಿ ತಲುಪಿದ ಮೇಲೆ ಬಚ್ಚಲು ಮನೆಯ ಗೀಸರ್‌ನ ಗುಂಡಿ ಆರಿಸಿಲ್ಲ ಎನ್ನುವುದು ನೆನಪಾಗುತ್ತದೆ. ಕಚೇರಿಯಿಂದ ಹಿಂದಿರುಗದೇ ಅದನ್ನು ಆಫ್ ಮಾಡುವುದು ಸಾಧ್ಯವಿರುವುದಿಲ್ಲ. ಹಾಗೊಂದು ವೇಳೆ ನೀವಿರುವ ಜಾಗದಿಂದಲೇ ಗೀಸರ್ ಅನ್ನು ಆಫ್ ಮಾಡಲು ಸಾಧ್ಯವಾದರೆ ನಿಮಗೆ ಅನುಕೂಲವಲ್ಲವೆ?

*****

ನಿಮ್ಮ ಕಂಪನಿ ಹೈನು ಘಟಕ ಉತ್ಪಾದಿಸಿರುವ ಹಾಲನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಸಾಗಿಸುವಾಗ – ಅದು ಪಯಣಿಸುವ ದಾರಿಯುದ್ದಕ್ಕೂ ಎಲ್ಲೆಲ್ಲಿ ಎಷ್ಟೆಷ್ಟು ವಾತಾವರಣದ ತೇವಾಂಶವಿದೆ, ಅದೇ ದಾರಿಯಲ್ಲಿ ಮುಂದುವರೆದರೆ ಹಾಲು ಕೆಡುವ ಸಾಧ್ಯತೆಗಳಿರುತ್ತವೆ, ಹಾಲನ್ನು ಕೆಡದಂತೆ ತಡೆಯಲು ಬೇರೆ ಮಾರ್ಗ ಅನುಸರಿಸಲು ಡ್ರೈವರ್‌ಗೆ ಸೂಚನೆಯನ್ನು ನೇರವಾಗಿ ಸಲಕರಣೆಗಳು ನೀಡುತ್ತವೆ. ಆಗ ಅಪಾರ ಶ್ರಮದಿಂದ ಉತ್ಪಾದಿಸಲ್ಪಟ್ಟ ಹಾಲು ಕೆಡದೆ ಸೇರಬೇಕಾದ ಸ್ಥಳವನ್ನು ಜೋಪಾನವಾಗಿ ಸೇರುತ್ತದೆ. ಇಷ್ಟೇ ಅಲ್ಲ. ನಿಮ್ಮ ಕಾರಿನಲ್ಲಿ ಪ್ರಯಾಣಕ್ಕೆ ಬೇಕಾದ ಪೆಟ್ರೋಲ್ ಇದೆಯೆ? ಟೈರ್‌ಗಳಲ್ಲಿ ಗಾಳಿ ಇದೆಯೆ? ಪಾರ್ಕಿಂಗ್‌ಗೆ ಎಷ್ಟು ಸ್ಥಳ ಇದೆ? ನಿಮ್ಮ ಮನೆಯ ಬಾಲ್ಕನಿಯ ಲೈಟ್ ಆಫ್ ಆಗಿದೆಯೆ? ತಿರುಗುತ್ತಿರುವ ಫ್ಯಾನ್, ಆನ್ ಆಗಿರುವ ಇಸ್ತ್ರಿಪೆಟ್ಟಿಗೆ, ಫ್ರಿಡ್ಜ್‌ನಲ್ಲಿರುವ ಹಾಲು ಖಾಲಿಯಾಗಿದೆಯೆ? – ಇಂಥ ಉಪಯುಕ್ತ ಮಾಹಿತಿಗಳ ಮೆಸೇಜ್ ನೇರವಾಗಿ ಫೋನ್‌ಗೆ ಬಂದರೆ ಎಷ್ಟು ಉಪಯುಕ್ತ ಅಲ್ಲವೇ?

***

ಹಾಂ, ಮೇಲಿನ ಚಿತ್ರಣಗಳೆಲ್ಲ ಕಲ್ಪನೆಗಳಲ್ಲ; ಶೀಘ್ರದಲ್ಲೇ ಮೊಬೈಲ್ ಫೋನ್‌ನಿಂದ ಈ ಎಲ್ಲ ಉಪಕರಣಗಳನ್ನು ನಿಯಂತ್ರಿಸುವ ಸೌಲಭ್ಯ ದೊರೆಯಲಿದೆ. ಈ ಜಾದು ಸಾಧ್ಯವಾಗುವ ದಿನ ತೀರಾ ಹತ್ತಿರವಿದೆ. ಇದೆಲ್ಲಕ್ಕೆ ಕಾರಣ – ಹೈಸ್ಪೀಡ್ ಇಂಟರ್ನೆಟ್ ಮತ್ತು ಬಿಗ್ ಡೇಟಾ ಟ್ರಾನ್ಸ್‌ಫರ್ ಆಧಾರಿತ 'ಇಂಟರ್ನೆಟ್ ಆಫ್ ಥಿಂಗ್ಸ್' ಅಥವಾ 'ಐಒಟಿ' ಎಂಬ ವಿನೂತನ ತಂತ್ರಜ್ಞಾನ.

ವರ್ತಮಾನದ ಭಾಷೆಯಲ್ಲಿ 'ಇಂಟರ್ನೆಟ್ ಆಫ್ ಎವ್ವೆರಿಥಿಂಗ್' ಎನ್ನುವುದು ಜನಪ್ರಿಯ ಮಾತು. ಜಗತ್ತಿನ ಸಂಪರ್ಕ ಕ್ರಾಂತಿಯ ಫಲದ ಮೊದಲನೇ ಫಲದಂತಿರುವ ಐಒಟಿ – ಇಂಟರ್ನೆಟ್ ಆಫ್ ಥಿಂಗ್ಸ್ ಎಂಬ ನವೀನ ವಿಷಯ ಈಗ ಎಲ್ಲರ ಪಾಲಿನ ಡಾರ್ಲಿಂಗ್ ಎನಿಸಿಬಿಟ್ಟಿದೆ. ಟೀವಿ ಧಾರಾವಾಹಿಯೊಂದರ ನಾಯಕ–ನಾಯಕಿಯರು 'ಎಂದೆಂದೂ ನಾನಿರುವೆ ಜೊತೆ ಜೊತೆಯಲೀ' ಎಂದು ಹಾಡುತ್ತಾರೆ. ಐಒಟಿಯಿಂದಾಗಿ ನಾವು ಬಳಸುವ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳು ಅದನ್ನೇ ಗುನುಗುನಿಸಲು ರೆಡಿಯಾಗಿವೆ.

## ಜೊತೆ ಜೊತೆಯಲಿ...

'ಐಒಟಿ' ಎಂಬ ಪದವನ್ನು ಮೊದಲ ಬಾರಿಗೆ ಬಳಸಿದ್ದು 1999ರಲ್ಲಿ. ಇದಕ್ಕೆ ಕನೆಕ್ಟೆಡ್ ಡಿವೈಸಸ್ ಎಂಬ ಇನ್ನೊಂದು ಹೆಸರೂ ಇದೆ. ಆನ್ ಮತ್ತು




